Sri V.R. Sudarshan, Hon'ble Chairman, Karnataka Legislative Council: Your Excellency, the President of India, I seek your kind permission to present my speech in our Official State Language Kannada. I have placed a copy of English version before you for your kind attention.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ನಾನು ತಮಗೆ ನಮಸ್ಕಾರ ಮಾಡುತ್ತಾ ಸಭಾತ್ಯಾಗ ಮಾಡುತ್ತಿದ್ದೇನೆ. ಈ ರಾಜ್ಯದಲ್ಲಿ ಕನ್ನಡಿಗರಿಗೆ ಏನೇನೂ ಆಗಿಲ್ಲ, ಕನ್ನಡಿಗರ ಸಮಸ್ಯೆ ಬಗ್ಗೆ ಹರಿದಿಲ್ಲ, ಕರ್ನಾಟಕ ಏಕೀಕರಣ ಬರೀ ಮಾತಿನಲ್ಲಿದೆ, ಏನೂ ಆಗಿಲ್ಲ. 50 ವರ್ಷಗಳಲ್ಲಿ ಕನ್ನಡಿಗರ ಪ್ರಶ್ನೆ (ಸಮಸ್ಯೆಗಳು) ಯಾವತ್ತೂ ಈಡೇರಿಲ್ಲ.

(ಈ ಹಂತದಲ್ಲಿ ವಿಧಾನಸಭಾ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾಂಗಣದಿಂದ ನಿರ್ಗಮಿಸಿದರು)

Sri V.R. Sudarshan, Hon'ble Chairman, Karnataka Legislative Council: Sir, you have really honoured the people of the Karnataka by your presence. It is the proud privilege of Karnataka Legislature to have you with us today on the "Suvarna Karnataka" occasion. Your scientific approach to solving the problems of our country is well known. Your vision of development of caring democracy of India is inspiring. Your called to the children of the country to ignite their minds is truely path breaking. ಕರ್ನಾಟಕ ವಿಧಾನ ಮಂಡಲದ ಇತಿಹಾಸವನ್ನು ಒಂದೆರಡು ಮಾತುಗಳಲ್ಲಿ ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಸಾರ್ವತ್ರಿಕ ಚುನಾವಣೆಗಳಾದ ನಂತರ ಮೊದಲನೇ ವಿಧಾನಸಭೆ 18ನೇ ಜೂನ್ 1952ರಲ್ಲಿ ಪ್ರಾರಂಭವಾಯಿತು. ಹಾಗೆಯೇ, ನಮ್ಮ ಕೆಂಗಲ್ ಹನುಮಂತಯ್ಯನವರ ನಿರ್ಮಾಣದ ಈ ವಿಧಾನಸೌಧದಲ್ಲಿ 19ನೇ ಡಿಸೆಂಬರ್ 1956ರಲ್ಲಿ ಮೊದಲ ಸಭೆ ಪ್ರಾರಂಭವಾಯಿತು. 1967ರ ಮೊದಲು 208 ಕ್ಷೇತ್ರಗಳಿಂದ ಬಂದ ಜನಪ್ರತಿನಿಧಿಗಳು ನಮ್ಮ ವಿಧಾನಸಭೆಯಲ್ಲಿದ್ದರು. 1967ರ ನಂತರ 224 ಸದಸ್ಯರುಗಳು ಮತ್ತು ಒಬ್ಬರು ನಾಮನಿರ್ದೇಶಿತ ಸದಸ್ಯರಿದ್ದಾರೆ. 1963ನೇ ಅಕ್ಟೋಬರ್ 10ರಂದು, ಅಂದಿನ ರಾಷ್ಟ್ರಪತಿಗಳಾದ ಶ್ರೀ ರಾಧಾಕೃಷ್ಣನ್‌ರವರು ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಮಾನ್ಯ ಜಯಚಾಮರಾಜೇಂದ್ರ ಒಡೆಯರ್‌ರವರು ಅಂದು ರಾಜ್ಯಪಾಲರಾಗಿದ್ದರು. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಹಳ್ಳಿಕೇರಿಯವರು ಮತ್ತು ಮಾನ್ಯ ವೈಕುಂಠ ಬಾಳಿಗಾರವರು ಸಭಾಧ್ಯಕ್ಷರು ಮತ್ತು ಸಭಾಪತಿಗಳಾಗಿದ್ದಂಥ ಒಂದು ಸಂದರ್ಭವದು. 1973ರಲ್ಲಿ ಜನಪ್ರಿಯ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ದೇವರಾಜ ಅರಸುರವರು ಮೈಸೂರು ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ನಾಮಕರಣ ಮಾಡಿದರು. ಇಡೀ ಕರ್ನಾಟಕದ ಎಲ್ಲಾ ಭಾಗದಲ್ಲಿಯೂ ಸಮಾನವಾಗಿ ಅಭಿವೃದ್ಧಿಯಾಗಬೇಕು ಎನ್ನುವುದು ಕರ್ನಾಟಕ ವಿಧಾನ ಮಂಡಲದ ಆಶಯವಾಗಿದೆ.

ಆದಕ್ಕಾಗಿ, ಡಾ: ನಂಜುಂಡಪ್ಪನವರ ವರದಿಗೆ ಕರ್ನಾಟಕ ವಿಧಾನ ಮಂಡಲ ಬೆಂಬಲವನ್ನು ಕೊಟ್ಟಿದೆ. ಹಾಗೆಯೇ ಕೇಂದ್ರ ಸರ್ಕಾರದ ಮುಂದೆ, ಸಂವಿಧಾನದ ಆರ್ಟಿಕಲ್ 371ರ ಪ್ರಕಾರ ವಿಶೇಷವಾದಂಥ ರೀತಿಯಲ್ಲಿ ಕರ್ನಾಟಕಕ್ಕೆ ಪ್ರಯೋಜನವನ್ನು ಕೊಡಬೇಕು, ಸಮಾನವಾದಂಥ ಅಭಿವೃದ್ಧಿಗೆ ಅವಕಾಶವನ್ನು ಕೊಡಬೇಕು ಎನ್ನುವ ಒಂದು ಅಪೇಕ್ಷೆ ಕರ್ನಾಟಕ ವಿಧಾನ ಮಂಡಲದ್ದೂ ಸಹಾ ಆಗಿದೆ. 1956ರಲ್ಲಿ ಭಾಷಾವಾರು ಆಧಾರದ ಮೇಲೆ ಕರ್ನಾಟಕ ಒಂದು ಹೊಸ ರಾಜ್ಯವಾಗಿ ಬಂದ ನಂತರ ಮಹಾಜನ್ ವರದಿಗೆ ಕರ್ನಾಟಕ ವಿಧಾನ ಮಂಡಲ ಬದ್ಧವಾಗಿದೆ. ಮಹಾಜನ್ ವರದಿಯನ್ನು ಅನುಷ್ಠಾನಗೊಳಿಸಬೇಕೆಂಬುದು ಕೂಡ ಕರ್ನಾಟಕದ ಎಲ್ಲಾ ಜನರ ಇಚ್ಛೆಯಾಗಿದೆ. ಹಾಗೆಯೇ ನಮ್ಮ ಕನ್ನಡ ಭಾಷೆಗೆ, ರಾಷ್ಟ್ರಕವಿ ಕುವೆಂಪುರವರು ಮೊದಲು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡ ನಂತರ, ಕನ್ನಡ ಭಾಷೆಯ ಆರು ಜನ ಸಾಹಿತಿಗಳಿಗೆ ಜ್ಞಾನಪೀಠ ಪ್ರಶಸ್ತಿಗಳು ಬಂದಿವೆ. ಭಾರತದ ಯಾವುದೇ ಭಾಷೆಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಆ ಗೌರವ ಸಂದಿಲ್ಲ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಶ್ರೀ ಯು.ಆರ್. ಅನಂತಮೂರ್ತಿಯವರೂ ಕೂಡ ಇವತ್ತು ಇಲ್ಲಿ ಉಪಸ್ಥಿತರಿದ್ದಾರೆ. ಹಾಗೆಯೇ, ಭಾರತ ರತ್ನ ಪ್ರಶಸ್ತಿಯನ್ನು ಪಡೆದಂಥ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಮತ್ತು ಸರ್ ಸಿ.ವಿ. ರಾಮನ್‌ರವರನ್ನು ಕೂಡ ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಹಾಗೆಯೇ, ಬ್ರಿಟಿಷರ ವಿರುದ್ಧ ಹೋರಾಟವನ್ನು ಮಾಡಿದಂಥ ಟಿಪ್ಪು ಸುಲ್ತಾನ್‌ರವರು ಮತ್ತು ಕಿತ್ತೂರು ರಾಣಿ ಚನ್ನಮ್ಮನವರನ್ನೂ ಕೂಡ ನಾವು ಸ್ಮರಿಸಿಕೊಳ್ಳುತ್ತೇವೆ. ನಮ್ಮ ವಿಧಾನ ಮಂಡಲಕ್ಕೆ ಬಹಳ ದೊಡ್ಡ ಸ್ಫೂರ್ತಿಯನ್ನು ಕೊಟ್ಟಂಥವರು ಬಸವಣ್ಣನವರು. ಅವರು 12ನೇ ಶತಮಾನದಲ್ಲಿಯೇ ನಮಗೆ ಸಮಾಜವಾದದ ಪರಿಚಯವನ್ನು ಮಾಡಿಕೊಟ್ಟರು. ಹಾಗೆಯೇ, ಕನಕದಾಸರೂ ಕೂಡ ಎಲ್ಲಾ ಸಮಾಜವಾದದ ಬಗ್ಗೆ ನಿರಂತರವಾಗಿ ನಮಗೆ ವಿಚಾರಗಳನ್ನು ತಿಳಿಸಿಕೊಟ್ಟಿದ್ದಾರೆ. ಹಾಗೆಯೇ, ಕರಾವಳಿ ಪ್ರದೇಶದ ಬ್ಯಾಂಕುಗಳು ಬಹಳ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ಕ್ಷೇತ್ರದಲ್ಲಿ, ಬರೀ ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ರಾಷ್ಟ್ರದಲ್ಲಿಯೇ ಬಹಳ ದೊಡ್ಡ ಪರಿವರ್ತನೆಗೆ, ಅಭಿವೃದ್ಧಿಗೆ ಅವಕಾಶವನ್ನು ಮಾಡಿಕೊಟ್ಟಿವೆ. ಅಂಬೇಡ್ಕರ್‌ರವರ ಆಶಯಗಳು, ಜವಹರಲಾಲ್ ನೆಹರೂರವರ ನವಭಾರತ ನಿರ್ಮಾಣದ ಕನಸುಗಳು ಮತ್ತು ಮಹಾತ್ಮ ಗಾಂಧಿಯವರ ತ್ಯಾಗ ಮತ್ತು ಹೋರಾಟಗಳ ಹಿನ್ನಲೆಯಲ್ಲಿ, ಅವುಗಳ ಸ್ಫೂರ್ತಿಯಲ್ಲಿ, ಆಗೊಮ್ಮೆ ಈಗೊಮ್ಮೆ ನಡೆಯಬಹುದಾದ ಲೋಪದೋಷಗಳ ಮಧ್ಯೆಯೂ ಕೂಡ, ಕರ್ನಾಟಕ ವಿಧಾನ ಮಂಡಲದ ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳು ಅತ್ಯುತ್ತಮವಾದ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಬಂದಿವೆ ಎನ್ನುವ ಬಗ್ಗೆ ಕೂಡ ನಾವು ಗಮನವನ್ನು ಹರಿಸಬೇಕಾಗುತ್ತದೆ. ಕರ್ನಾಟಕ ವಿಧಾನ ಮಂಡಲಕ್ಕೆ ಒಂದು ಅಪೇಕ್ಷೆ ಇದೆ, ಅದು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನವನ್ನು ಕೊಡಬೇಕು ಎನ್ನುವುದಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರದ ಮುಂದೆ, ನಮ್ಮ ಮುಖ್ಯಮಂತ್ರಿಯವರಾದಂಥ ಶ್ರೀಯುತ ಧರ್ಮಸಿಂಗ್‌ರವರು ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ಒತ್ತಾಯವನ್ನು ಮಾಡಿದ್ದಾರೆ. ಅದು ನಮ್ಮ ಕರ್ನಾಟಕ ವಿಧಾನ

ಮಂಡಲದ ಅಪೇಕ್ಷೆ ಕೂಡ ಆಗಿದೆ. ಹಾಗೆಯೇ, ಇಲ್ಲಿರುವಂಥ ರಿವರ್ ಡಿಸ್ಪ್ಯೂಟ್‌ಗಳಿಗೆ ಕೂಡ ಒಂದು ಪರಿಹಾರವನ್ನು ಕಂಡುಕೊಳ್ಳುವ ಇಚ್ಛಾಶಕ್ತಿಯನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳಬೇಕು ಎನ್ನುವುದನ್ನು ಕರ್ನಾಟಕ ವಿಧಾನ ಮಂಡಲ ಪುನಃ ಪುನಃ ಹೇಳುತ್ತಾ ಬಂದಿದೆ. ಇದರ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸಬೇಕು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಿರಂತರವಾಗಿ 50 ವರ್ಷಗಳಲ್ಲಿ ನಮ್ಮ ಕರ್ನಾಟಕ ವಿಧಾನ ಮಂಡಲ ಮಾಧ್ಯಮದ ಸ್ನೇಹಿತರೊಂದಿಗೆ ಮತ್ತು ಜ್ಯುಡಿಷಿಯರಿ ಜೊತೆಗೆ ಉತ್ತಮವಾದ ಬಾಂಧವ್ಯದ ಜೊತೆಯಲ್ಲಿ, ಸಂವಿಧಾನದ ಚೌಕಟ್ಟಿನಲ್ಲಿ, ಸಂವಿಧಾನವನ್ನು ಮೀರದೇ ನಾವು ನಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದೇವೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರಲು ಬಯಸುತ್ತಾ, ತಾವು ಇಲ್ಲಿಗೆ ಬಂದಿರತಕ್ಕಂಥಾದ್ದು ನಿಜಕ್ಕೂ ಕೂಡ ಕರ್ನಾಟಕದ ಜನರಿಗೆ ಮತ್ತು ಕರ್ನಾಟಕ ವಿಧಾನ ಮಂಡಲಕ್ಕೆ ಸಂದಂಥ ಗೌರವ ಎಂದು ನಾನು ತಮಗೆ ವಿನಮ್ರವಾಗಿ ತಿಳಿಸಲು ಬಯಸುತ್ತಾ, ನಮ್ಮ ನಾಡಗೀತೆಯಾದಂಥ 'ಜಯಭಾರತ ಜನನಿಯ ತನುಜಾತೇ, ಜಯಹೇ ಕರ್ನಾಟಕ ಮಾತೇ' ಎಂದು ಹೇಳುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ನಮಸ್ಕಾರ.

Sri Vaijanath Patil (Chincholi): Sir, the Hyderabad-Karnataka region has not been given the status under Article 371 of the Constitution eventhough a Resolution was passed in the Assembly.

(At this stage Hon. Member Sri Vaijanath Patil staged a Wajk-out).

ಈ ಹಂತದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಧರಂಸಿಂಗ್‌ರವರು, ಘನತೆವೆತ್ತ ರಾಷ್ಟ್ರಪತಿಗಳಾದ ಡಾ: ಎ.ಪಿ.ಜೆ. ಅಬ್ದುಲ್ ಕಲಾಂರವರಿಗೆ ನೆನಪಿನ ಕಾಣಿಕೆಯನ್ನು ನೀಡಿದರು.

ನಂತರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರವರು, ಕರ್ನಾಟಕ ಕಾನೂನು ಸಂಪುಟಗಳನ್ನು ಘನತೆವೆತ್ತ ರಾಷ್ಟ್ರಪತಿಗಳಿಗೆ ಉಡುಗೊರೆಯಾಗಿ ನೀಡಿದರು.

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು): ಘನತೆವೆತ್ತ ಭಾರತದ ರಾಷ್ಟ್ರಪತಿಯವರಾದಂಥ ಡಾ: ಎ.ಪಿ.ಜೆ. ಅಬ್ದುಲ್ ಕಲಾಂಜಿಯವರೇ, ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದಂಥ ಶ್ರೀ ಟಿ.ಎನ್. ಚತುರ್ವೇದಿಯವರೇ, ಮಾನ್ಯ ಸಭಾಪತಿಗಳೇ, ಮಾನ್ಯ ಸಭಾಧ್ಯಕ್ಷರೇ, ಉಭಯ ಸದನಗಳ ಸದಸ್ಯರೇ, ಗಣ್ಯರೇ, ಆಹ್ವಾನಿತರೇ, ವಿರೋಧ ಪಕ್ಷದ ನಾಯಕರೇ, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದಂಥ ಸೋಧಿಯವರೇ, ರಾಜ್ಯ ಸಭೆಯ ಉಪಾಧ್ಯಕ್ಷರಾದಂಥ ರಹಮಾನ್ ಖಾನ್‌ಜಿಯವರೇ, ಎಲ್ಲಾ ಮಾಜಿ ಶಾಸಕ ಮಿತ್ರರೇ, ಮಾಜಿ ವಿಧಾನಸಭೆಯ ಅಧ್ಯಕ್ಷರುಗಳೇ, ಲೋಕಸಭಾ ಸದಸ್ಯರುಗಳೇ, ಮಾಜಿ ಲೋಕಸಭೆಯ ಸದಸ್ಯರುಗಳೇ, ಸಾಹಿತಿಗಳೇ, ಇತರೆ ಎಲ್ಲಾ ಸನ್ಮಾನಿತ ಆಹ್ವಾನಿತರೇ, ಮಾಧ್ಯಮದ ಮಿತ್ರರೇ, Your Excellency the President of India